**<u>IIನೇ ಹೆಚ್ಚುವರಿ ಸಿವಿಲ್ ಮತ್ತು ಜೆ.ಎಮ್.ಎಫ್.ಸಿ ನ್ಯಾಯಾಲಯ ಬೆಳಗಾವಿ</u>**

**OS No.620/2000**
**PW.1**

**<u>ದಿನಾಂಕಃ 17.08.2026 ರಂದು ಸಾಕ್ಷಿಯನ್ನು ಕರೆಯಿಸಿ ಪ್ರಮಾಣ ವಚನ ಭೋಧಿಸಲಾಯಿತು.</u>**
**<u>ಮುಂದುವರೆದ ಪಾಟೀ ಸವಾಲು ಪ್ರತಿವಾದಿಪರ ಶ್ರೀಃAAP ವಕೀಲರಿಂದ.</u>**

1ನೇ ಪ್ರತಿವಾದಿ ಪಾಲು ವಿಭಾಗ ಕೋರಿ ಮೂಲ ದಾವೆ ನಂ.11/1989ನ್ನು ಸಲ್ಲಿಸಿದ್ದರು ಎಂದರೆ ನನಗೆ ಗೊತ್ತಿಲ್ಲ. ಆ ದಾವೆಯಲ್ಲಿ ನಾನು ಶ್ರೀ.AGK ವಕೀಲರ ಮೂಲಕ ಹಾಜರು ಆಗಿದ್ದೆವು ಎಂದರೆ ಸರಿ. ಪ್ರಸ್ತುತ ದಾವಾ ಆಸ್ತಿ RS ನಂ.259 ಮೂಲ ದಾವೆ ನಂ.11/1989ರ ದಾವೆಯಲ್ಲಿ ಇರುವಂತಹ ಆಸ್ತಿ ಆಗಿರುತ್ತದೆ ಎಂದರೆ ಸರಿ. ಗೌರವಾನ್ವಿತ ಉಚ್ಚ ನ್ಯಾಯಾಲಯದಿಂದ ರಿಮಾಂಡ್ ಆದ ನಂತರ 1ನೇ ಹೆಚ್ಚುವರಿ ಸಿವಿಲ್ ನ್ಯಾಯಾಲಯದಲ್ಲಿ ಆ ದಾವೆ dismissed for non prosecution ಆಗಿರುತ್ತದೆ ಎಂದರೆ ನನಗೆ ಗೊತ್ತಿಲ್ಲ. ಪ್ರಸ್ತುತ ದಾವೆಗಿಂತ ಪೂರ್ವದಲ್ಲಿ ಮೂಲ ದಾವೆ ನಂ.11/1989 ಹಾಗೂ ಪ್ರಸ್ತುತ ದಾವೆ ಗೌರವಾನ್ವಿತ ಕರ್ನಾಟಕ ಉಚ್ಚ ನ್ಯಾಯಾಲಯದಲ್ಲಿ ಇದ್ದವು ಎಂದರೆ ಸರಿ. ನಾವು ಸಲ್ಲಿಸಿದ ಪ್ರಸ್ತುತ ದಾವೆ ಹಾಗೂ ಮೂಲ ದಾವೆ ನಂ.11/1989ನ್ನು ಈ ಎರಡು ದಾವೆಗಳನ್ನು ಗೌರವಾನ್ವಿತ ಉಚ್ಚ ನ್ಯಾಯಾಲಯದಲ್ಲಿ ಸದರಿ ಎರಡು ದಾವೆಗಳು ಒಟ್ಟಾಗಿಯೇ ವಿಚಾರಣೆ ಆಗಬೇಕು ಎಂದು ರಿಮಾಂಡ್ ಮಾಡಿ ಕಳುಹಿಸಿರುತ್ತಾರೆ ಎಂದರೆ ಸರಿಯಲ್ಲ.

2. ನಾನು ಸಲ್ಲಿಸಿದ ದಾವಾ ಆಸ್ತಿ RS ನಂ.259ನೇದರ ಪಹಣಿ ಅಲ್ಲಿಕೆಯಲ್ಲಿ ನನ್ನ ಹೆಸರು ಇರುತ್ತದೆ. ನಮ್ಮ ತಂದೆ ಮೂಲಕ ನನಗೆ ಸದರಿ ಆಸ್ತಿ ಬಂದಿದ್ದು ಆ ಪ್ರಕಾರ ಪಹಣಿ ಪತ್ರಿಕೆಯಲ್ಲಿ ನಮೂದು ಆಗಿರುತ್ತದೆ. ನಮ್ಮ ತಂದೆ ತೀರಿಕೊಂಡ ನಂತರ ನನ್ನ ತಾಯಿ ಮೂಲಕ ನನಗೆ ಬಂದಿರುತ್ತದೆ. ಇವತ್ತಿನವರೆಗೂ ಸದರಿ ಪಹಣಿ ಪತ್ರಿಕೆಯನ್ನು ಪರಿಶೀಲನೆ ಮಾಡಿದರೆ ನನ್ನ ಹೆಸರು ಇರುವುದಿಲ್ಲ ಎಂದರೆ ಸರಿಯಲ್ಲ.

3. ನನ್ನ ತಂದೆಯ ಹೆಸರು ಸಿದ್ದನಾಥ. ನನ್ನ ತಂದೆ ದಾವಾ ಆಸ್ತಿ ಸರ್ಕಾರದಿಂದ ಬಂದಿರುತ್ತದೆ. ನಾರಾಯಣ ಶೆಟ್ಟು ನಾಯಕ ನನಗೆ ಗೊತ್ತಿಲ್ಲ. ಸದರಿ ಆಸ್ತಿ ಸರ್ಕಾರದಿಂದ ನಮ್ಮ ತಂದೆಗೆ ಬಂದಿರುವುದು ಮಾತ್ರ ನನಗೆ ಗೊತ್ತಿರುತ್ತದೆ, ನಮ್ಮ ತಂದೆ PWDಯಲ್ಲಿ ಕೆಲಸ ಮಾಡುತಿದ್ದು ನಮ್ಮ ತಂದೆಯೇ ಅರ್ಜಿ ನೀಡಿದ್ದರಿಂದ ಸದರಿ ಆಸ್ತಿ ಬಂದಿರುತ್ತದೆ. ನನ್ನ ತಂದೆ ಸರ್ಕಾರಿ ನೌಕರಿ ಮಾಡುತಿದ್ದರು. ನಮ್ಮ ತಂದೆ ನಾನು ಒಂದು ವರ್ಷದವಳು ಇದ್ದಾಗ ತೀರಿಕೊಂಡಿರುತ್ತಾರೆ. ನಮ್ಮ ತಂದೆ ತೀರಿಕೊಂಡಾಗ ಅವರಿಗೆ ವಯಸ್ಸು ಎಷ್ಟು ಇತ್ತು ಎಂದು ನನಗೆ ಗೊತ್ತಿಲ್ಲ. ದಾವಾ ಆಸ್ತಿ ನಮ್ಮ ತಂದೆಯ ಸ್ವಂತ ಆಸ್ತಿ ಆಗಿರುವುದಿಲ್ಲ ಎಂದರೆ ಸರಿಯಲ್ಲ. ನಮ್ಮ ತಂದೆಯ ತಂದೆ ಅಂದರೆ ಅಜ್ಜನ ಆಸ್ತಿ ಆಗಿರುತ್ತದೆ ಎಂದರೆ ಸರಿಯಲ್ಲ. ನಮ್ಮ ಅಜ್ಜನ ಹೆಸರು ಗೋವಿಂದ. ದಾವಾ ಆಸ್ತಿಯ ಮೂಲ ಮಾಲೀಕರು ಕೃಷ್ಣಬಾಯಿ @ಮಾಲುತಾಯಿ ರಾಜರಾಮಪಂತ ಜೋಶಿ ಆಗಿದ್ದರು ಎಂದರೆ ಸರಿಯಲ್ಲ ಸಾಕ್ಷಿಯು ಮುಂದುವರೆದು ನಮ್ಮ ತಂದೆಗೆ ಸರ್ಕಾರದಿಂದ ದಾವಾ ಆಸ್ತಿ ಬಂದಿರುತ್ತದೆ ಎಂದು ನುಡಿಯುತ್ತಾರೆ. ಸದರಿ ಕೃಷ್ಣಬಾಯಿ @ಮಾಲುತಾಯಿ ರಾಜರಾಮಪಂತ ಜೋಶಿರವರ ಆಸ್ತಿಯನ್ನು ನನ್ನ ತಂದೆಯ ತಂದೆ ಅಂದರೆ ನಮ್ಮ ಅಜ್ಜ ಗೋವಿಂದರವರು ರೈತನಾಥೆಯಿಂದ ಸದರಿ ದಾವಾ ಆಸ್ತಿಯನ್ನು ಮಾಡುತಿದ್ದರು ಎಂದರೆ ಸರಿಯಲ್ಲ. ಸದರಿ ಗೋವಿಂದ ಪ್ರತಿವಾದಿಗಳ ತಂದೆ ಎಂದರೆ ಸರಿ. ದಾವಾ ಆಸ್ತಿಯ ಉತಾರದಲ್ಲಿ ಗೋವಿಂದನ ಹೆಸರು ರೈತ ಎಂದು ನಮೂದು ಮಾಡಲಾಗಿತ್ತು ಎಂದರೆ ಸರಿಯಲ್ಲ. ನಮ್ಮ ಅಜ್ಜ ಗೋವಿಂದ ಯಾವಾಗ ತೀರಿಕೊಂಡಿರುತ್ತಾರೆ ಎಂದು ನನಗೆ ಗೊತ್ತಿಲ್ಲ. ದಾವಾ ಆಸ್ತಿ ಸರ್ವೆ ನಂ. 259 ಭೂ ನ್ಯಾಯ ಮಂಡಳಿಯಲ್ಲಿ ಪಾರಂ ತುಂಬಿದ ಪ್ರಕಾರ ಮಂಜೂರು ಆಗಿರುತ್ತದೆ ಎಂದರೆ ಸರಿ. ಸದರಿ ಪಾರಂ.7ರಲ್ಲಿ ನಮ್ಮ ಅಜ್ಜ ಗೋವಿಂದ ಗಂಗರಾಮ ನಾಯಕ ರೈತನಾಥೆಯಿಂದ ಉಳುಮೆ ಮಾಡುತಿದ್ದು ಈತ ತೀರಿಕೊಂಡ ನಂತರ ಸದರಿ ಅರ್ಜಿದಾರ ಸಿದ್ದನಾಥ ನಾಯಕ ಉಳುಮೆ ಮಾಡುತಿದ್ದರು ಎಂದು ಸದರಿ ಪಾರಂ.7ರಲ್ಲಿ ನಮೂದು ಮಾಡಲಾಗಿದೆ ಎಂದರೆ ಸರಿಯಲ್ಲ. ಸದರಿ ಪಾರಂ.7ರಲ್ಲಿರುವ ವಿಷಯ ನನಗೆ ಎಲ್ಲಾ ಗೊತ್ತಿದ್ದರು ಸಹ ಈ ಮೇಲಿನಂತೆ ಗೊತ್ತಿಲ್ಲ ಎಂದು ಸುಳ್ಳು ಹೇಳುತಿದ್ದೇನೆ ಎಂದರೆ

ಸರಿಯಲ್ಲ. ದಾವಾ ಆಸ್ತಿ ಕೇವಲ ನಮ್ಮ ತಂದೆಗೆ ಮಾತ್ರ ನೀಡಲಾಗಿದೆ ಎಂದು ಸುಳ್ಳು ಹೇಳುತಿದ್ದೇನೆ ಎಂದರೆ ಸರಿಯಲ್ಲ. ಸದರಿ ದಾವಾ ಆಸ್ತಿ ತಮ್ಮ ತಂದೆಯ ಆಸ್ತಿ ಆಗಿರುತ್ತದೆ ಎಂದು ತಮಗೆ ಹಿಸ್ಸೆ ಇದೆ ಎಂದು ಹೇಳಿ ಮೂಲ ದಾವೆ ನಂ.11/1989ನ್ನು ಸಲ್ಲಿಸಿದ್ದರು ಎಂದರೆ ಸರಿಯಲ್ಲ. ದಾವಾ ಆಸ್ತಿಯ ಕಬ್ಜೆ ಸಂಪೂರ್ಣವಾಗಿ ನನ್ನ ಹತ್ತಿರ ಇರುವುದಿಲ್ಲ ಎಂದರೆ ಸರಿಯಲ್ಲ. ದಾವಾ ಆಸ್ತಿಯ ಸಂಪೂರ್ಣ ಕಬ್ಜೆ ಪ್ರತಿವಾದಿಯರ ಕಡೆಯೇ ಇರುತ್ತದೆ ಎಂದರೆ ಸರಿಯಲ್ಲ.

**(ಮುಂದುವರೆದ ಪಾಟೀ ಸವಾಲಿಗೆ ಸಮಯಾವಕಾಶ ನೀಡಲಾಯಿತು)**

**(ತೆರೆದ ನ್ಯಾಯಾಲಯಾದಲ್ಲಿ ಸಾಕ್ಷಿಯ ಹೇಳಿಕೆಯನ್ನು ಯಥಾವತ್ತಾಗಿ ಬೆರಳಚ್ಚು ಮಾಡಿಸಲಾಯಿತು)**

**ಓ ಹೇ ಕೇ ಸರಿಯಿದೆ.**

**Sd/-**

**II ಹೆಚ್ಚುವರಿ ನ್ಯಾಯಾಲಯ ಮತ್ತು**
**ಜೆ.ಎಂ.ಎಫ್.ಸಿ. ಬೆಳಗಾವಿ**